ಮೈಸೂರ ಗೆಜಿಟ.

ಸರ್ಕಾರದಿಂದ ಪ್ರಾಯಿಷ್ ಆದ್ದು.

ಬೆಂಗಳೂರು, ಶನಿವಾರ, ನವೆಂಬರ್ ತಾ|| 29, ಸ್ 1890.

☞ ಈ ಭಾಗವನ್ನು ಪ್ರತ್ಯೇಕ ಕೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ.

ಇಂಡ್ಯೂಗವರ್ನ್‌ಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್‌ರು, ವಗೈರೇರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಇಸ್ತಿಹಾರ್ ನಾಮೆ.

ಮೈಸೂರು ಚೀಫ್ ಕೋರ್ಟ್‌ನಲ್ಲಿ.

ಸ್ 1890ನೇ ಈಸವಿ ನವೆಂಬರ್ 14ನೇ ತಾರೀಖು.

ಎರಾಟಂ.

ಸ್ 1890ನೇ ಈಸವಿ ಮಾರ್ಚಿ 12ನೇ ತಾರೀಖಿನ 52ನೇ ನಂಬರ್ ಕ್ರಿಮಿನಲ್ ರೂಲ್ ಆಫ್ ಪ್ರಾಕ್ಟಿಸ್ಸಿಂಬ ಆಚರಣಾ ನಿಬಂಧನೆಯ 1ನೇ ಪ್ಯಾರಾದಲ್ಲಿ "ಸೆಷ್ಷ ಪೂರೈಸಿದ 48 ಘಂಟೆ ಯೊಳಗಾಗಿ" ಎಂಬುವುದಕ್ಕೆ ಬದಲಾಗಿ, "ಪ್ರತಿ ಬಂದು ಮೊಕದ್ದಮೆಯು ವಿಚಾರಣೇ ಪೂರೈಸಿದ 48 ಘಂಟೇ ಯೊಳಗಾಗಿ" ಎಂಬದಾಗಿ ಓದಿಕೊಳ್ಳಬೇಕೆಂದು ಚೀಫ್ ಕೋರ್ಟ್‌ನವರು ಅಪ್ಪಣೇ ಮಾಡುತ್ತಾರೆ.

ಕೋರ್ಟ್ ಅಪ್ಪಣೇ ಪ್ರಕಾರ,
ಎಸ್. ಹೇಮಾಜಿರಾವ್,
ರೆಜಿಸ್ಟ್ರಾರ್.

ಫಾರೆಸ್ಟ್ ಇಲಾಖೆ.

ನಂ. 9. ತಾರೀಖು 29ನೇ ಸೆಪ್ಟಂಬರ್ 1890.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ—ಮೈಸೂರು ದೇಶದಲ್ಲಿ ಉತ್ಪತ್ತಿಯಾದ ಗಂಧದ ಸಾಲೀಯಾನು ಹರಿಜಾಗಳು ಈ ಕೆಳಗೆ ನಮೂದಾಗುವ ಜಾಗಾಗಳಲ್ಲಿ ಅವುಗಳ ಬಾಜೂದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಆಯಾಯ ಡಿಸ್ಟ್ರಿಕ್ಟು ಪೆರುಟಿ ಕಮ್ಮಿಷನರವರು ವ ಫಾರೆಸ್ಟ್ ಆಫೀಸರರುಗಳಿಂದ ನಡಿಸಲ್ಪಡುವವು.

ಶಿವಮೊಗ್ಗ ಡಿಸ್ಟ್ರಿಕ್ಟು ಶಿಕಾರಿಪುರದ ಕೋಠಿ			14ನೇ ನವೆಂಬರ್ 1890 -ಹೆಚ್ಚು ಕಡಮೆ 250 ಟ್ಯಗಳು.
ಶಿವಮೊಗ್ಗ ..	ಡಿಟೋ—	17ನೇ ಡಿಟೋ	450 ಡಿಟೋ
ತೀರ್ಥಹಳ್ಳಿ ..	ಡಿಟೋ—	22ನೇ ಡಿಟೋ	100 ಡಿಟೋ
ಕಡೂರು ಡಿಸ್ಟ್ರಿಕ್ಟು ಚಿಕ್ಕಮಗಳೂರು	ಡಿಟೋ—	28ನೇ ಡಿಟೋ	200 ಡಿಟೋ
ಹಾಸನ ಡಿಸ್ಟ್ರಿಕ್ಟು ಹಾಸನ	ಡಿಟೋ—	4ನೇ ಡಿಸೆಂಬರ್	300 ಡಿಟೋ
ಮೈಸೂರು ಡಿಸ್ಟ್ರಿಕ್ಟು ಶ್ರೀರಂಗಪಟ್ಟಣ	ಡಿಟೋ—	10ನೇ ಡಿಟೋ	350 ಡಿಟೋ
ಹುಣಸೂರು ಡಿಟೋ	ಡಿಟೋ—	15ನೇ ಡಿಟೋ	450 ಡಿಟೋ
ಬೆಂಗಳೂರು ಡಿಸ್ಟ್ರಿಕ್ಟು	ಡಿಟೋ—	20ನೇ ಡಿಟೋ	150 ಡಿಟೋ

ಪರಾಜಿನ ಪರತ್ತುಗಳು—1887ನೇ ಇಸವಿ ಆಗಸ್ಟ್ 27 ಮತ್ತು ಸೆಪ್ಟಂಬರ್ 3ನೇ ಮರ್ಕುಂಗಳ 34, 35ನೇ ನಂಬರ್ ಗೆಜೆಟ್‌ಗಳಲ್ಲಿ ಪ್ರಾಯಿಷ್ ಮಾಡಲ್ಪಟ್ಟ ಇಸ್ತಿಹಾರ್‌ಗಳನ್ನ ನೋಡಿಕೊಳ್ಳತಕ್ಕದ್ದು. ಮತ್ತು ಸದರೀ ಇಸ್ತಿಹಾರ್‌ಗಳು ಪರಾಜ್ ಕಾಲದಲ್ಲಿ ವ್ಯೋದಲ್ಪಡುವವು.

ಎಲ್. ರಿಕ್ಕೆಟ್ಸ್,
ಫಾರೆಸ್ಟ್ ಇನ್‌ಸ್ಪೆಕ್ಟರ್ ಜನರಲ್.